

# ಸೋನಾಕ್ಷಿ ಈಗ ನಿರ್ಮಾಪಕಿ

'ದಬಾಂಗ್' ಬೆಡಗಿ ಸೋನಾಕ್ಷಿ ಸಿನ್ಹಾ ಹೊಸ ಇನಿಂಗ್ಸ್ ಪ್ರಾರಂಭಿಸುತ್ತಿದ್ದಾರೆ. ಬಿಟೌನಿನಲ್ಲಿ ನಿರ್ಮಾಣಕ್ಕಿಳಿದಿರುವ ನಟಿಯರ ಸಾಲಿಗೆ ಸೇರ್ಪಡೆಯಾಗುತ್ತಿದ್ದಾರೆ ಅವರು. ನಟ ರಣಬೀರ್ ಕಪೂರ್ ಸಹ ಇತ್ತೀಚೆಗಷ್ಟೇ ಚಿತ್ರ ನಿರ್ಮಾಣಕ್ಕಿಳಿದಿದ್ದಾರೆ. ಪ್ರೀತಿ ಜಿಂಟಾ, ಶಿಲ್ಪಾ ಶೆಟ್ಟಿ, ದಿಯಾ ಮಿರ್ಜಾ ಮುಂತಾದ ಅನುಭವಿ ನಟಿಯರು ಸಿನಿಮಾಕ್ಕೆ ಬಂಡವಾಳ ಹೂಡಿ ಕೈಸುಟ್ಟುಕೊಂಡ ಉದಾಹರಣೆಗಳು ಕಣ್ಣ ಮುಂದಿವೆ.  ನಟಿಯರ ಪಾಲಿಗೆ ನಿರ್ಮಾಣ ಒಲಿಯದ ಕ್ಷೇತ್ರ ಎನ್ನುವುದು ಕೆಲವರ ಅಭಿಮತ. ನಾಯಕಿ ಪಟ್ಟ ಕಳಚಿಕೊಂಡ ಬಳಿಕವಷ್ಟೇ ನಿರ್ಮಾಣ ಸಾಹಸಕ್ಕೆ ಕೈಹಾಕುವುದು ಒಳಿತು ಎನ್ನುವುದು ಚಾಲ್ತಿಯಲ್ಲಿರುವ ಅನೇಕ ನಟಿಯರ ಅಭಿಪ್ರಾಯ. ಇನ್ನು ಕೆಲವರು ತಮಗೆ ಈ ಉಸಾಬರಿಯೇ ಬೇಡ ಎಂದು ಸುಮ್ಮನಾಗಿದ್ದಾರೆ.

ಅತ್ತ ಅನುಷ್ಕಾ ಶರ್ಮಾ ತಮ್ಮ ಎರಡನೇ ಚಿತ್ರ ನಿರ್ಮಾಣಕ್ಕೆ ಸಿದ್ಧತೆ ನಡೆಸುತ್ತಿದ್ದರೆ, ಸೋನಾಕ್ಷಿ ಸಹೋದರರ ಜತೆಗೂಡಿ ನಿರ್ಮಾಣ ಸಂಸ್ಥೆ ಹುಟ್ಟುಹಾಕುತ್ತಿದ್ದಾರೆ. ಹೇಳಿ ಕೇಳಿ ಸಿನಿಮಾ ಕುಟುಂಬದಿಂದಲೇ ಬಂದವರಾಗಿರುವುದರಿಂದ ಸೋನಾಕ್ಷಿಗೆ ನಿರ್ಮಾಣಕ್ಕಿಳಿಯುವುದು ಕಷ್ಟವಾಗಿಲ್ಲ. ತಮ್ಮ ಕುಟುಂಬ ಆರಂಭಿಸಲಿರುವ ನಿರ್ಮಾಣ ಸಂಸ್ಥೆಯಲ್ಲಿ ನೇರ ಅಥವಾ ಪರೋಕ್ಷವಾಗಿ ತೊಡಗಿಸಿಕೊಳ್ಳುವುದಾಗಿ ಹಿಂದೊಮ್ಮೆ ಹೇಳಿದ್ದರು ದುಂಡು ಮುಖದ ಸುಂದರಿ. ಈಗ ಆ ಕಾಲ ಸನ್ನಿಹಿತವಾಗಿದೆ. ಸೋನಾಕ್ಷಿ ತಮ್ಮ ಅವಳಿ ಸಹೋದರರಾದ ಲವ ಮತ್ತು ಕುಶರ ಜತೆ ಸೇರಿ 'ಕ್ರಟೊಸ್ ಎಂಟರ್‌ಟೈನ್‌ಮೆಂಟ್' ಸಂಸ್ಥೆ ಪ್ರಾರಂಭಿಸುತ್ತಿದ್ದಾರೆ. ಸಹೋದರರೊಂದಿಗೆ ಸೇರಿ ಚಿತ್ರ ನಿರ್ಮಿಸುವುದಾಗಿ ಸೋನಾಕ್ಷಿ ಹೇಳಿದ್ದರೂ ಎಷ್ಟರಮಟ್ಟಿಗೆ ಅವರು ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ ಎನ್ನುವುದಿನ್ನೂ ಸ್ಪಷ್ಟವಾಗಿಲ್ಲ. ಏಕೆಂದರೆ ಬಾಲಿವುಡ್‌ನ ಬಹುಬೇಡಿಕೆಯ ನಟಿಯರಲ್ಲಿ ಸೋನಾಕ್ಷಿಯೂ ಒಬ್ಬರು. ರಜನಿಕಾಂತ್ ಜತೆ ನಟಿಸುವ ಅವಕಾಶ ಗಿಟ್ಟಸಿಕೊಂಡ ನಂತರ ಅವರ ಅದೃಷ್ಟವೇ ಬದಲಾಗಿದೆ ಎನ್ನಲಾಗುತ್ತಿದೆ. ಸೋನಾಕ್ಷಿ ಅಭಿನಯದ 'ಆ್ಯಕ್ಷನ್ ಜಾಕ್ಸನ್', 'ತೇವರ್', 'ಲಿಂಗಾ' ಚಿತ್ರಗಳು ಬಿಡುಗಡೆಗೆ ಕಾದಿವೆ. ಸೋನಾಕ್ಷಿ ನಿರ್ಮಾಣದ ಚಿತ್ರದ ಆಯ್ಕೆ ಹೇಗಿರುತ್ತದೆ ಎನ್ನುವುದು ಸದ್ಯದ ಕುತೂಹಲ.

# ಮೇಣದ ಗೊಂಬೆ ಕತ್ರೀನಾ!

ಕತ್ರೀನಾ ಕೈಫ್‌ರನ್ನು ದಂತದ ಗೊಂಬೆ ಎಂದು ವರ್ಣಿಸುವುದನ್ನು ಕೇಳಿದ್ದೀವಿ, ಇದೇನು ಮೇಣದ ಗೊಂಬೆ ಎಂಬ ಪ್ರಶ್ನೆಯೇ? ನಿಜ. ಕ್ಯಾಟ್ ಮೇಣದ ಗೊಂಬೆಯಾಗಲಿದ್ದಾರೆ. ಲಂಡನ್‌ನ ಮೇಡಂ ಟುಸ್ಸಾಡ್ ಮ್ಯೂಸಿಯಂನಲ್ಲಿ ಗಣ್ಯಾತಿಗಣ್ಯರ ಮೇಣದ ಪ್ರತಿಮೆಗಳ ಜತೆಯಲ್ಲಿ ಕತ್ರೀನಾರ ಮೇಣದ ಪ್ರತಿಮೆಯೂ ನಿಲ್ಲಲಿದೆ. ಅಮಿತಾಭ್ ಬಚ್ಚನ್, ಶಾರೂಖ್ ಖಾನ್, ಐಶ್ವರ್ಯಾ ರೈ, ಸಲ್ಮಾನ್ ಖಾನ್, ಹೃತಿಕ್ ರೋಷನ್, ಕರೀನಾ ಕಪೂರ್ ಹೀಗೆ ಬಿಟೌನ್ ತಾರೆಯರನೇಕರು ಮೇಡಂ ಟುಸ್ಸಾಡ್ ಮ್ಯೂಸಿಯಂನಲ್ಲಿ ಮೇಣದ ಪ್ರತಿಮೆಗಳಾಗುವ ಗೌರವ ಪಡೆದುಕೊಂಡಿದ್ದಾರೆ. ಈ ಗೌರವ ಕತ್ರೀನಾರಿಗೂ ಒಲಿಯುತ್ತಿದೆ ಎನ್ನುವ ಸುದ್ದಿ ಬಂದಿದೆ. ಮ್ಯೂಸಿಯಂ ಅಧಿಕಾರಿಗಳಿಂದ ಕತ್ರೀನಾರಿಗೆ ಈ ಕುರಿತಂತೆ ಪತ್ರವೊಂದು ಬಂದಿದೆಯಂತೆ. ಮೂಲಗಳ ಪ್ರಕಾರ ಮ್ಯೂಸಿಯಂ ಅಧಿಕಾರಿಗಳು ಕತ್ರೀನಾರ 'ರಾಜನೀತಿ' ಚಿತ್ರದ ಸೀರೆ ಉಡುಪಿನಲ್ಲಿರುವ ಪ್ರತಿರೂಪವನ್ನು ನಿರ್ಮಿಸಲು ಯೋಚಿಸಿದ್ದಾರಂತೆ.

'ಶೀಲಾ ಕಿ ಜವಾನಿ' ಮತ್ತು 'ಚಿಕ್ನಿ ಚಮೇಲಿ' ಹಾಡಿನ ದಿರಿಸಿನ ಶೈಲಿಯ ಪ್ರತಿಮೆಗಳ ಸೃಷ್ಟಿಯೂ ಅವರ ಆಯ್ಕೆಯಲ್ಲಿವೆ. ಅಭಿನಯದಲ್ಲಿ ಕ್ಯಾಟ್ ಸುಧಾರಿಸದಿದ್ದರೂ ಆಕೆಗೆ ಸಿಗುತ್ತಿರುವ ಮನ್ನಣೆ ದೊಡ್ಡದೇ. ಆದರೆ ಕತ್ರೀನಾರ ಇತ್ತೀಚಿನ ಜಾಹೀರಾತು ಅವಕಾಶಗಳನ್ನೆಲ್ಲಾ ಹೊಸ ಹುಡುಗಿ ಅಲಿಯಾ ಭಟ್ ಬಾಚಿಕೊಳ್ಳುತ್ತಿದ್ದಾರಂತೆ. ಕ್ಯಾಟ್ ಬ್ರಾಂಡ್ ಅಂಬಾಸೆಡರ್ ಆಗಿದ್ದ ಕೆಲವು ಉತ್ಪನ್ನಗಳು ಅಲಿಯಾರ ಪಾಲಾಗಿವೆ. ಅಲಿಯಾ ಈಗ ಕ್ಯಾಟ್‌ರಷ್ಟೇ ಜನಪ್ರಿಯರು. ಮಿಗಿಲಾಗಿ ಯುವಜನತೆಯನ್ನು ಕ್ಯಾಟ್‌ಗಿಂತಲೂ ಹೆಚ್ಚು ಆಕರ್ಷಿಸಬಲ್ಲರು ಎನ್ನುವುದು ಈ ಜಾಹೀರಾತು ಕಂಪೆನಿಗಳ ಅಭಿಪ್ರಾಯ. ಒಮ್ಮೆ ಅಲಿಯಾ ಭಟ್‌ರ ಸಾಮಾನ್ಯ ಜ್ಞಾನದ ಮೇಲೆ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿರುವ ಜೋಕುಗಳನ್ನು ನೆನಪಿಸಿಕೊಳ್ಳಿ, 'ಕತ್ರೀನಾರಿಗೆ ಸರಿಸಮ ಎಂದಾದ ಮೇಲೆ ನನ್ನ ಮೇಣದ ಪ್ರತಿಮೆಯನ್ನೂ ಸೃಷ್ಟಿಸಬಹುದಲ್ಲವೇ?' ಎಂದು ಅಲಿಯಾ ಕೇಳಿದರೂ ಕೇಳಬಹುದು!

■ ಅಮಿ

